ಈ ದಿನ ದಿನಾಂಕಃ 11.11.2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀಸವಾಲು ಪ್ರತಿವಾದಿ ಪರ ಶ್ರೀ ಎಂ ಬಿ ಆರ್ ವಕೀಲರಿಂದಃ</u>**

ನಾನು ವಿದ್ಯಾಬ್ಯಾಸ ಮಾಡಿರುವುದಿಲ್ಲ. ಪ್ರಸ್ತುತ ದಾವೆಯನ್ನು ಸಲ್ಲಿಸಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಮಲಹಾಳ್ ಗ್ರಾಮದ ಸರ್ವೆ ನಂ. 46 ರ 3 ಎಕರೆ 15 ಗುಂಟೆ ವಿಸ್ತೀರ್ಣಕ್ಕೆ ದಾವೆಯನ್ನು ಸಲ್ಲಿಸಿರುತ್ತೇನೆ. ಪ್ರಸ್ತುತ ದಾವೆಯ ದಾವಾ ಆಸ್ತಿ ಚೆಕ್ಕುಬಂದಿ ಪೂರ್ವಕ್ಕೆ ಸುಭದ್ರಮ್ಮ ಹಾಗೂ ಕರಿಯಪ್ಪನವರ ಜಮೀನು, ಪಶ್ಚಿಮಕ್ಕೆ ತಿಮ್ಮಪ್ಪ ಮತ್ತು ತಿಪ್ಪೇಶಪ್ಪನವರ ಜಮೀನು, ಉತ್ತರಕ್ಕೆ ಆನೇ ತಿಮ್ಮಪ್ಪನವರ ಜಮೀನು ಮತ್ತು ದಕ್ಷಿಣಕ್ಕೆ ಸರ್ಕಾರಿ ಗುಡ್ಡ ಇರುತ್ತದೆ. ದಕ್ಷಿಣ ದಿಕ್ಕಿಗೆ ಇರುವ ಸರ್ಕಾರಿ ಗುಡ್ಡ ಸರ್ವೆ ನಂ. 46 ರಲ್ಲಿದೆ. ಸದರಿ ಸ್ವತ್ತನ್ನು ಬಿಡಿಸಿಕೊಳ್ಳುವ ಉದ್ದೇಶದಿಂದ ದಾವೆಯನ್ನು ಸಲ್ಲಿಸಿರುತ್ತೇನೆ.

2. ಪ್ರತಿವಾದಿಗಳು ಸುಮಾರು 2 ವರ್ಷಗಳ ಹಿಂದೆ ಬಂದು ತೊಂದರೆಯನ್ನು ನೀಡಿರುತ್ತಾರೆ. ಪ್ರತಿವಾದಿಗಳು ತೊಂದರೆ ನೀಡಿದ ದಿನಾಂಕವನ್ನು ನನಗೆ ನಿಖರವಾಗಿ ಹೇಳಲಾಗುವುದಿಲ್ಲ. ಪ್ರತಿವಾದಿಗಳು ಯಾವುದೇ ತೊಂದರೆಯನ್ನು ನೀಡಿರುವುದಿಲ್ಲ. ಹಾಗಾಗಿ ನನಗೆ ದಿನಾಂಕವನ್ನು ನಿಖರವಾಗಿ ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಪ್ರತಿವಾದಿಗಳು ತೊಂದರೆ ನೀಡಿದ ದಿನಾಂಕವನ್ನು ನಮೂದಿಸಿರುವುದರಿಂದ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ.

3. ನಿಪಿ 3 ರಂತೆ ದಾವಾ ಆಸ್ತಿಯ ದಕ್ಷಿಣ ಬಾಗಕ್ಕೆ ಸರ್ಕಾರಿ ಗುಡ್ಡ ಸರ್ವೆ ನಂ. 38 ರಲ್ಲಿ ಅಸ್ಥಿತ್ವದಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 3 ರಲ್ಲಿ ಸರ್ವೆ ನಂ. 38 ಎಂದು ದಕ್ಷಿಣ ದಿಕ್ಕಿಗೆ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಪ್ರತಿವಾದಿಗಳು ಜಮೀನಿದೆ ಎಂದರೆ ಸರಿಯಲ್ಲ. ನಮಗೂ ಹಾಗೂ ಪ್ರತಿವಾದಿಗಳಿಗೂ 2020 ರಲ್ಲಿ ಗಲಾಟೆಯಾಗಿ ಠಾಣೆಯಲ್ಲಿ ದೂರು ದಾಖಲಾಗಿರುತ್ತದೆ ಎಂದರೆ ಸರಿ. ಪೊಲೀಸ್ ಠಾಣೆಯಲ್ಲಿ ನಮ್ಮ ಹಾಗೂ ಪ್ರತಿವಾದಿಗಳ ನಡುವೆ ರಾಜಿ ಪಂಚಾಯಿತಿಯಲ್ಲಿ 10 ಅಡಿ ದಾರಿಯನ್ನು ಪ್ರತಿವಾದಿಗಳು ವಾದಿಗೆ ಬಿಟ್ಟುಕೊಡುವಂತೆ ನಿರ್ಧಾರ ಮಾಡಲಾಗಿತ್ತು ಎಂದರೆ ಸರಿಯಲ್ಲ.

4. ದಾವಾ ಸ್ವತ್ತಿನಲ್ಲಿ ಅಡಿಕೆ ಗಿಡವನ್ನು ಕಟ್ಟಿರುತ್ತೇನೆ. ಸಾಕ್ಷಿಗೆ ಒಂದು ಬಾವಚಿತ್ರವನ್ನು ತೋರಿಸಿ ಅಡಿಕೆ ಜಮೀನಿನ ಪಕ್ಕದ ಜಮೀನು ಪ್ರತಿವಾದಿಗೆ ಸೇರಿದ್ದು ಎಂದು ತೋರಿಸಿದಾಗ ನಿರಾಕರಿಸಿರುತ್ತಾರೆ. ಪ್ರತಿವಾದಿಗಳು ತಮ್ಮಆಸ್ತಿಯಲ್ಲಿ ನಿಂತು ಬಾವಚಿತ್ರ ತೆಗೆಸಿಕೊಂಡಿರುತ್ತಾರೆ ಎಂದು ಸಾಕ್ಷಿಗೆ ತೋರಿಸಿದಾಗ ಅವರ ಜಮೀನಲ್ಲ ಅದು ನನ್ನ ಜಮೀನು ಎಂದು ತಿಳಿಸಿರುತ್ತಾರೆ. ಪ್ರತಿವಾದಿಗಳ ಜಮೀನಿನಲ್ಲಿ ಬೋರ್ ವೆಲ್ ನ್ನು ಹಾಕಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಅವರ ಜಮೀನಿಗೆ ಸಂಬಂದಿಸಿದಂತೆ ಕಂದಾಯವನ್ನು ಸಹ ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಯಾವುದೇ ತೊಂದರೆಯನ್ನು ನೀಡಿರುವುದಿಲ್ಲ. ನಾನು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಬೋರ್ ವೆಲ್ ಇರುವುದಕ್ಕೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಹಾಜರುಪಡಿಸಲು ಯಾವುದೇ ಸಮಸ್ಯೆ ಇರುವುದಿಲ್ಲ. ಪ್ರತಿವಾದಿಗಳಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.